# ಜೀವಿಸದ ಬದುಕು



ದಾಜಿ

ಪೂಜ್ಯ ಬಾಬೂಜಿ ಮಹಾರಾಜರ

127ನೆಯ ಜಯಂತ್ಯೋತ್ಸವ ಸಂದರ್ಭದಲ್ಲಿ ನೀಡಿದ ಸಂದೇಶ

ಏಪ್ರಿಲ್ 29, 30, ಮತ್ತು ಮೇ 1, 2026, ಕಾನ್ಹಾ ಶಾಂತಿವನಂ



# ಜೀವಿಸದ ಬದುಕು

## ಅಂಜಿಕೆ ತೊರೆದದ್ದನ್ನು ನಂಬಿಕೆ ಪೊರೆಯುತ್ತದೆ

ಪ್ರಿಯ ಸ್ನೇಹಿತರೆ,

2026ರ ಬಸಂತೋತ್ಸವದಲ್ಲಿ ಬಿಡುಗಡೆಯಾದ ಭಂಡಾರ ಸಂದೇಶಗಳ ಸರಣಿಯಲ್ಲಿ, ನಾವು ನಮ್ಮ ಪ್ರಗತಿಯ ಆರು ಬಾಧಕಗಳನ್ನು ಅನ್ವೇಷಿಸಿದೆವು: ಬಯಕೆ ಮತ್ತು ಆಕಾಂಕ್ಷೆಗಳು ಹೃದಯವನ್ನು ವಿರುದ್ಧ ದಿಕ್ಕುಗಳಲ್ಲಿ ಎಳೆದಾಗ ಏನಾಗುತ್ತದೆ; ಚೈತನ್ಯ ಚಲಿಸುವ ಕಾರಣವನ್ನು ಕಳೆದುಕೊಂಡಾಗ ಏನಾಗುತ್ತದೆ; ಅನುಭವ ದೊರೆತರೂ ವಿಶ್ವಾಸವಿರದಿದ್ದಾಗ ಏನಾಗುತ್ತದೆ; ಸಾಧನೆ ಅಸ್ಮಿತೆಯಾಗಿ ಘನೀಭವಿಸಿದರೆ ಏನಾಗುತ್ತದೆ; ದೃಷ್ಟಿ ತನ್ನ ಸ್ವಂತ ಜೀವನದಿಂದ ಹೊರಳಿ ಬೇರೆಯವರ ಬದುಕಿನತ್ತ ತಿರುಗಿದರೆ ಏನಾಗುತ್ತದೆ; ಮನಸ್ಸು ತನ್ನ ಸ್ವಭಾವಸಿದ್ಧ ನಿರ್ಣಯಗಳ ಸುತ್ತ ಗಿರಕಿಹೊಡೆದು, ತನ್ನ ವಿಕೃತ ನೋಟವನ್ನೇ ಸ್ಪಷ್ಟ ದೃಷ್ಟಿಯೆಂದು ತಪ್ಪು ತಿಳಿದಾಗ ಏನಾಗುತ್ತದೆ.

ಈಗ, ಇವೆಲ್ಲವುಗಳ ಒಳಗೆ ಅಡಗಿದ, ಇವೆಲ್ಲವುಗಳಿಗಿಂತ ಅತಿ ಆಳವಾದ ಬಾಧಕವನ್ನು ನೋಡೋಣ.

ತನ್ನ ಜೀವನವನ್ನೆಲ್ಲ ಬಾಗಿಲೊಂದನ್ನು ಕಾಯುತ್ತ ಕಳೆದ ಮನುಷ್ಯನೊಬ್ಬನ ಕುರಿತಾದ ಪುರಾತನ ಕಥೆಯೊಂದಿದೆ. ಅವನು ಯುವಕನಾಗಿದ್ದಾಗ, ಆತನಿಗೆ ಬೇಕಾದುದೆಲ್ಲ ಆ ಬಾಗಿಲಿನ ಹಿಂದಿತ್ತಾದರೂ, ಅದು ಆತನ ಸರ್ವನಾಶಕ್ಕೂ ಕಾರಣವಾಗಬಹುದೆಂದು ಆತನಿಗೆ ಹೇಳಲಾಗಿತ್ತು. ಹಾಗಾಗಿ ಆತ ಅದರ ಬೀಗವನ್ನೆಂದೂ ತೆರೆಯದೆ, ಅದನ್ನು ಕಾಯುತ್ತ ನಿಂತನು. ಅಲ್ಲಿಯೇ ನಿಂತು ಆತ ವೃದ್ಧನೂ ಆದನು. ಕೊನೆಗೊಮ್ಮೆ ಮೃತ್ಯು ಸಮೀಪಿಸಿದಾಗ, ಆತ ದೇವದೂತನನ್ನು ಕೇಳಿದನು, "ಅದು ನಿಜವೆ? ಆ ಬಾಗಿಲಿನ ಹಿಂದೆ ನಿಜವಾಗಲೂ

ವಿನಾಶವಿದೆಯೆ?" ದೇವದೂತ ಬಾಗಿಲನ್ನು ತೆರೆದಾಗ ಕೋಣೆ ಖಾಲಿಯಾಗಿತ್ತು, ಅದು ಎಂದಿಗೂ ಖಾಲಿಯೆ ಇತ್ತು.

ಭಯ ನಮ್ಮನ್ನು ನಿಜವಾದ ಅಪಾಯದಿಂದ ಕಾಪಾಡುವುದಿಲ್ಲ. ಅದು ನಮ್ಮನ್ನು ಕಲ್ಪಿತ ಅಪಾಯಗಳಿಂದಲೂ ರಕ್ಷಿಸುವುದಾದರೂ, ಹಾಗೆ ಮಾಡುವಾಗ ಜೀವನ ನಮ್ಮೆದುರಿದ್ದಾಗಲೂ, ನಾವು ಕೋಣೆಯ ಒಳಹೋಗದಂತೆ ತಡೆಯುತ್ತದೆ.

## ಎಲ್ಲವನ್ನೂ ಪೋಣಿಸುವ ಎಳೆ

ಮುಂದಿನ ವಾಕ್ಯ ನಾವು ಇದುವರೆಗೆ ನೋಡಿದುದೆಲ್ಲವನ್ನೂ ಮರುರಚಿಸಬಹುದು: ಭಯ ಏಳನೆಯ ವಿಷವಲ್ಲ, ಅದು ಮೊದಲನೆಯದು. ಅದು ಎಂದಿನಿಂದಲೂ ಇದ್ದು, ಬೇರೆ ಬೇರೆ ವೇಷ ಧರಿಸಿ, ವಿಭಿನ್ನ ಹೆಸರುಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು, ಅಷ್ಟೆ.

'ವಿಭಜಿತ ಹೃದಯ'ವನ್ನು ಪುನಃ ನೋಡೋಣ: ಉಚ್ಚತರ ತೋಳವನ್ನು ಪೋಷಿಸುವ ಅಗತ್ಯ ಸ್ಪಷ್ಟವಾಗಿದ್ದಾಗಲೂ, ಅನ್ವೇಷಕನು ನಿಮ್ನತರ ತೋಳವನ್ನೇಕೆ ಪೋಷಿಸುತ್ತಾನೆ? ಏಕೆಂದರೆ ಉಚ್ಚತರ ತೋಳವನ್ನು ಆಯ್ಕೆ ಮಾಡುವುದೆಂದರೆ, ಪರಿಚಿತವಾದುದನ್ನು ತೊರೆದು, ಫಲ ಅನಿಶ್ಚಿತವಾದ ಕ್ಷೇತ್ರಕ್ಕೆ ಕಾಲಿಡುವುದು. ವಿಭಜಿತ ಹೃದಯ ನಿಜವಾಗಲೂ ಬಯಕೆಯಿಂದ ವಿಭಜಿತಗೊಂಡಿಲ್ಲ; ಅದು ಭಯದಿಂದ ವಿಭಜಿತಗೊಂಡಿದೆ; ಅದು, ಒಂದು ಪಾರ್ಶ್ವವನ್ನು ಆಯ್ದುಕೊಂಡಾಗ ಏನನ್ನು ಕಳೆದುಕೊಳ್ಳುವೆವೊ ಎಂಬ ಭಯ, ಒಮ್ಮೆ ಸೇತುವೆಯನ್ನು ದಾಟಿದರೆ ಮರಳಿ ಬರಲಾರೆವು ಎಂಬ ಭಯ.

ಸುಪ್ತಾಗ್ನಿಯ ಬಗ್ಗೆ ಪುನಃ ನೋಡೋಣ: ಎಲ್ಲ ಬಗೆಯ ಕೌಶಲ, ಅವಕಾಶ ಹಾಗು ಯೋಜನೆಯಿರುವ ಯುವತಿ ಅತ್ತಿತ್ತ ಹೋಗದೆ ಹಾಸಿಗೆಯಲ್ಲೇ ಇರುತ್ತಾಳೆ? "ನನ್ನೊಳಗಿನ ಯಾವುದೊ ಒಂದು ನನ್ನನ್ನು ತಡೆಯುತ್ತದೆ," ಎಂದಾಕೆ ಹೇಳುತ್ತಾಳೆ. ನಾವದನ್ನು ಆಲಸ್ಯ

ಭಯ ಏಳನೆಯ ವಿಷವಲ್ಲ, ಅದು ಮೊದಲನೆಯದು. ಅದು ಎಂದಿನಿಂದಲೂ ಇದ್ದು, ಬೇರೆ ಬೇರೆ ವೇಷ ಧರಿಸಿ, ವಿಭಿನ್ನ ಹೆಸರುಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು, ಅಷ್ಟೆ.



ಸಂಶಯವು ಬುದ್ಧಿವಂತಿಕೆಯಲ್ಲ; ಅದು ಗತಕಾಲದ ಭಯ, ಯಾವುದನ್ನು ನೀಡಲಾಗಿದೆಯೊ ಅದನ್ನು ಕಿತ್ತುಕೊಳ್ಳಬಹುದೆಂಬ ಭಯ ಹಾಗು ನಮ್ಮ ಕಾಲಡಿಯ ನೆಲವು ಕಾಣುವಷ್ಟು ಭದ್ರವಾಗಿಲ್ಲವೆಂಬ ಭಯ. ನಾವದನ್ನು ಸಂಶಯವೆಂದು ಹೆಸರಿಸಿದ್ದರೂ, ಲ್ಯಾಬ್‌ಕೋಟ್ ತೊಟ್ಟ ಅದರ ನಿಜವಾದ ಹೆಸರು ಭಯ.

ಅಥವಾ ತಮಸ್ಸು ಎಂದು ಕರೆಯುತ್ತೇವೆ, ಆದರೆ ಆ ಅಗ್ನಿಯನ್ನು ಅಡಗಿಸಿದವರಾರು? ಭಯ: ಜವಾಬ್ದಾರಿಯ ಭಯ, ನಿಜವಾಗಲೂ ಜಾಗೃತಗೊಂಡಾಗ ಏನಾಗುತ್ತದೊ ಎಂಬ ಭಯ, ಪ್ರಯತ್ನಿಸಿ ಯಶಸ್ವಿಯಾದರೆ ಯಶಸ್ಸನ್ನು ಪಡೆಯುತ್ತಲೆ ಇರಬೇಕಾಗುತ್ತದೆಂಬ ಭಯ, ಯತ್ನಿಸಿ ಸೋತರೆ ಆ ವೈಫಲ್ಯವು ನೀವು ಎಂದಿನಿಂದಲೂ ರಹಸ್ಯವಾಗಿ ನಿಮ್ಮ ಬಗ್ಗೆ ಇಟ್ಟುಕೊಂಡಿದ್ದ ಸಂದೇಹವನ್ನು ಖಚಿತಗೊಳಿಸುತ್ತದೆಂಬ ಭಯ. ಸುಪ್ತಾಗ್ನಿಯು ತಾನಾಗಿಯೆ ನಂದಿಲ್ಲ. ಅದನ್ನು ನಂದಿಸಿದ ಭಯವು, ಬೂದಿಯ ಮೇಲೆ ನಿಂತು ಅದನ್ನು ಆಲಸ್ಯವೆಂದು ಹೆಸರಿಸುತ್ತಿದೆ.

ಬಿರಿದ ಬುನಾದಿಯ ಬಗ್ಗೆ ಪುನಃ ನೋಡೋಣ: ಹನ್ನೊಂದು ವರ್ಷಗಳ ಕಾಲ ಧ್ಯಾನಮಾಡಿ, ಸುತ್ತಲಿನ ಎಲ್ಲರೂ ಅವಳಲ್ಲಾದ ಪರಿವರ್ತನೆಯನ್ನು ಕಣ್ಣಾರೆ ಕಂಡಮೇಲೂ ಆ ಮಹಿಳೆ ಈಗಲೂ, "ಇದು ನಿಜವೆ? ನಿಜಕ್ಕೂ ಏನಾದರೂ ಬದಲಾವಣೆ ಆಗಿದೆಯೆ?" ಎಂದೇಕೆ ಕೇಳುತ್ತಾರೆ? ಏಕೆಂದರೆ ತನ್ನದೇ ಪರಿವರ್ತನೆಯನ್ನು ಸ್ವೀಕರಿಸುವುದೆಂದರೆ, ಅದನ್ನು ಕಳೆದುಕೊಳ್ಳುವ ಸಾಧ್ಯತೆಗೆ ತೆರೆದುಕೊಳ್ಳುವುದು. ಸಂಶಯವು ಬುದ್ಧಿವಂತಿಕೆಯಲ್ಲ; ಅದು ಗತಕಾಲದ ಭಯ, ಯಾವುದನ್ನು ನೀಡಲಾಗಿದೆಯೊ ಅದನ್ನು ಕಿತ್ತುಕೊಳ್ಳಬಹುದೆಂಬ ಭಯ ಹಾಗು ನಮ್ಮ ಕಾಲಡಿಯ ನೆಲವು ಕಾಣುವಷ್ಟು ಭದ್ರವಾಗಿಲ್ಲವೆಂಬ ಭಯ. ನಾವದನ್ನು ಸಂಶಯವೆಂದು ಹೆಸರಿಸಿದ್ದರೂ, ಲ್ಯಾಬ್‌ಕೋಟ್ ತೊಟ್ಟ ಅದರ ನಿಜವಾದ ಹೆಸರು ಭಯ.

ನಾವು ಮತ್ತೊಮ್ಮೆ ಅಹಂಕಾರ ಹುಟ್ಟುಹಾಕಿದ ಭಾವಣೆಯತ್ತ ಕಣ್ಣು ಹಾಯಿಸೋಣ: ತಾನೇ ಕಟ್ಟಿದ ಹಸಿರುಮನೆಯನ್ನು ಒಡೆದುಹಾಕುವುದನ್ನು ಅಹಂಕಾರವೇಕೆ ತಿರಸ್ಕರಿಸಿತು? ಏಕೆಂದರೆ, ಮುಕ್ತ ಗಗನಕ್ಕೆ ಗೋಡೆಗಳಿಲ್ಲ. ಹಸಿರುಮನೆಯ ಹೊರಗೆ, ನಿಜವಾದ ಹವಾಮಾನವಿದೆ: ನೈಜ ಮಾರುತ, ನೈಜ ಬಿರುಗಾಳಿ, ಮತ್ತು ನೈಜ ಅನೂಹ್ಯತೆಗಳಿವೆ. ವಾಸ್ತವದಲ್ಲಿ ಅಹಂಕಾರದ ಆವರಣವು ಹಮ್ಮಿಗೆ ಸಂಬಂಧಿಸಿದುದಲ್ಲ; ಅದು ರಕ್ಷಣೆಗೆ ಸಂಬಂಧಿಸಿದೆ. ಗಾಜು ಒಡೆದಾಗ ನಮ್ಮದೆಲ್ಲ ಬಯಲಾಗುತ್ತದೆ. ಅಹಂಕಾರವೆನ್ನುವುದು

ಸಾಧನೆಯ ದಿರಸಿನಲ್ಲಿರುವ ಭಯವಷ್ಟೆ.

ಕಡ ಪಡೆದ ಗಾಯದ ಕಡೆಗೆ ಪುನಃ ನೋಡೋಣ: ಮತ್ಸರಿ ಹೃದಯವು ತನ್ನ ಬದುಕನ್ನು ಜೀವಿಸುವ ಬದಲು ಅತ್ತಿತ್ತ ಬೇರೆಯವರ ಜೀವನದೆಡೆಗೇಕೆ ಕಣ್ಣು ಹಾಯಿಸುತ್ತದೆ? ಏಕೆಂದರೆ ನಮ್ಮದೇ ಬದುಕನ್ನು ಜೀವಿಸುವುದೆಂದರೆ, ನಮಗೆ ನೀಡಲಾಗಿರುವುದು ಸಾಕೆ ಅಥವಾ ನಾವೇ ಪರ್ಯಾಪ್ತರೆ ಎಂಬ ದಿಗಿಲು ಹುಟ್ಟಿಸುವ ಪ್ರಶ್ನೆಯನ್ನು ಎದುರಿಸಿದಂತೆ. ಮತ್ಸರಮತ್ತೊಬ್ಬರ ಕಾಣಿಕೆಗಳ ಬಗೆಗಲ್ಲ; ಅದು ನಮಗೆ ದೊರೆತ ಕಾಣಿಕೆಗಳು ಸಾಕಷ್ಟಿಲ್ಲವೆಂಬ ಭಯ. ಅಸೂಯೆಯೆಂದರೆ, ಹೋಲಿಕೆಯ ಮುಖವಾಡ ತೊಟ್ಟ ಭಯ.

ನಾವು ಕಾಣಲಾಗದ ಗೋಡೆಗಳ ಬಗ್ಗೆ ಪುನಃ ಚರ್ಚಿಸೋಣ: ಮನಸ್ಸು ಸ್ವಭಾವಸಿದ್ಧ ನಿರ್ಣಯಗಳ ಹಿಂದೆ ಅಡಗಿ, ಹೊಸ ಬೆಳಕು ಪ್ರವೇಶಿಸದಂತೆ ಏಕೆ ತಡೆಯುತ್ತದೆ? ಏಕೆಂದರೆ ಮುಕ್ತತೆಯು ಭಯಾನಕ. ಪ್ರಪಂಚದ ಬಗೆಗಿನ ನಮ್ಮ ಅನಿಸಿಕೆ ಭಾಗಶಃ ಮಾತ್ರವೆಂದು ಒಪ್ಪಿಕೊಳ್ಳುವುದೆಂದರೆ, ನಮ್ಮ ಬುನಾದಿ ಭದ್ರವಿಲ್ಲವೆಂದು ಒಪ್ಪಿಕೊಂಡಂತೆ. ಪೂರ್ವಗ್ರಹ ನಿಜವಾಗಲೂ ಮತ್ತೊಬ್ಬರ ಬಗೆಗೊ ಅಥವಾ ಬೇರೆ ಧರ್ಮ, ಬೇರೆ ಸಮುದಾಯ ಅಥವಾ ಬೇರೆ ರೀತಿಯ ದೃಷ್ಟಿಕೋನದ ಬಗೆಗಲ್ಲ. ಅದು, ನಾವೇನಾದರೂ ಕಿಟಕಿ ತೆರೆದು, ಹೆಸರಿಲ್ಲದ ಬಣ್ಣವನ್ನು ಒಳಬರಗೊಟ್ಟರೆ, ನಾವು ಯಾವುದರ ಮೇಲೆ ನಮ್ಮ ಅಸ್ಮಿತೆಯನ್ನು ನಿರ್ಮಿಸಿಕೊಂಡಿದ್ದೇವೊ, ಅವೆಲ್ಲವನ್ನೂ ಮರಳಿ ಪರಿಶೀಲಿಸಬೇಕಾಗುತ್ತದೆಂಬ ಭಯ.

ಈ ಏಳು ವಿಷಗಳ ಮೂಲ, ಅದೇ ನಡುಕ.



ನಾವೇನಾದರೂ ಕಿಟಕಿ ತೆರೆದು, ಹೆಸರಿಲ್ಲದ ಬಣ್ಣವನ್ನು ಒಳಬರಗೊಟ್ಟರೆ, ನಾವು ಯಾವುದರ ಮೇಲೆ ನಮ್ಮ ಅಸ್ಮಿತೆಯನ್ನು ನಿರ್ಮಿಸಿಕೊಂಡಿದ್ದೇವೊ, ಅವೆಲ್ಲವನ್ನೂ ಮರಳಿ ಪರಿಶೀಲಿಸಬೇಕಾಗುತ್ತದೆಂಬ ಭಯ.

## ಪಾರ್ಶ್ವವಾಯುವಿನ (ನಿಷ್ಕ್ರಿಯತೆಯ) ರಚನೆ

ಭಯವು ಉತ್ಪ್ರೇಕ್ಷೆಯಿಂದ ಕಾರ್ಯನಿರ್ವಹಿಸುತ್ತದೆ. ಅದು ಸಾಧ್ಯತೆಯೊಂದನ್ನು ತೆಗೆದುಕೊಂಡು, ಇಡೀ ದಿಗಂತವೆಲ್ಲ ತುಂಬುವವರೆಗೆ ಅದನ್ನು ಹಿಗ್ಗಿಸುತ್ತದೆ. ಭಯದ ಕೈಯಲ್ಲಿ, "ನಾನು ವಿಫಲನಾದರೆ ಹೇಗೆ?" ಎಂಬುದು ನಿಶ್ಚಿತ ದುರಂತವಾಗುತ್ತದೆ; "ಅವರು ನನ್ನನ್ನು ತಿರಸ್ಕರಿಸಿದರೆ?" ಎಂಬುದು ನಿರ್ವಿವಾದ ಸತ್ಯವಾಗುತ್ತದೆ, "ನಾನೇ ಸರಿಯಿಲ್ಲವಾದರೆ?" ಎಂಬುದು ಇನ್ನೂ ಪೂರ್ಣವಾಗಿ ಜೀವಿಸದ ಬದುಕಿನ ಅಂತಿಮ ನಿರ್ಧಾರವಾಗುತ್ತದೆ.

ಕಠೋಪನಿಷತ್ತಿನಲ್ಲಿ, ಪರಮ ಸತ್ಯವನ್ನು ಹುಡುಕುತ್ತ ಮೃತ್ಯುದೇವತೆ ಯಮನ ಲೋಕಕ್ಕೆ ಸ್ವಇಚ್ಛೆಯಿಂದ ಹೋಗುವ ನಚಿಕೇತನ ಕಥೆ ಬರುತ್ತದೆ. ನಚಿಕೇತನ ತಂದೆ ಯಜ್ಞವೊಂದನ್ನು ಮಾಡಿದಾಗ, ಆತನು ಅತ್ಯುತ್ತಮ ವಸ್ತುಗಳನ್ನೆಲ್ಲ ತನಗಾಗಿ ಉಳಿಸಿಕೊಂಡು, ಹಳೆಯ ಮತ್ತು ಅಪ್ರಯೋಜಕ ವಸ್ತುಗಳನ್ನು ದಾನಮಾಡುತ್ತಾನೆ. ಈ ಕೃತಿಯ ಟೊಳ್ಳುತನವನ್ನು ಕಂಡ ಬಾಲಕನು, "ನನ್ನನ್ನು ಯಾರಿಗೆ ನೀಡುವೆ?" ಎಂದು ಮೂರು ಸಲ ಕೇಳಿದಾಗ ಆತನ ತಂದೆಯು ಕೋಪದಲ್ಲಿ, "ನಿನ್ನನ್ನು ಮೃತ್ಯುವಿಗೆ ಕೊಡುವೆ" ಎನ್ನುತ್ತಾನೆ.

ಕೂಡಲೆ ಬಾಲಕ ಹೊರಡುತ್ತಾನೆ. ಇಲ್ಲೊಬ್ಬ ಬಾಲಕ, ವಯಸ್ಕರೆಲ್ಲರೂ ಅಂಜಿ ನಡುಗುವ ವ್ಯಕ್ತಿಯ ಬಳಿ ಹೋಗುತ್ತಿದ್ದಾನೆ; ಅದು ದುಸ್ಸಾಹಸದಿಂದಲ್ಲ, ಅದಕ್ಕೆ ಕಾರಣ, ಆತನಲ್ಲಿದ್ದ ಸತ್ಯದ ಹಂಬಲವು ಅಳಿವಿನ ಭಯಕ್ಕಿಂತ ಹೆಚ್ಚಾಗಿತ್ತು. ನಚಿಕೇತ ಯಮಲೋಕವನ್ನು ತಲುಪಿದಾಗ ಯಮ ಅಲ್ಲಿರಲಿಲ್ಲ, ಹಾಗಾಗಿ ಆ ಬಾಲಕನು ಯಮಲೋಕದ ದ್ವಾರದಲ್ಲಿ ಸಂತೈಸುವರಿಲ್ಲದೆ, ಆಹಾರಾಶ್ರಯಗಳಿಲ್ಲದೆ, ಮೂರು ಹಗಲು ಮೂರು ರಾತ್ರಿಗಳನ್ನು ಕಳೆಯುತ್ತಾನೆ. ಯಮ ಮರಳಿ ಬಂದಾಗ, ಇಂತಹ ಧೈರ್ಯವನ್ನು ಕಂಡು ಮೂರು ವರಗಳನ್ನು ಪ್ರಸಾದಿಸುತ್ತಾನೆ.

ನಚಿಕೇತನು ಮೊದಲ ವರವಾಗಿ ತನ್ನ ತಂದೆಯ ಕೋಪವನ್ನು ಕರಗಿಸುವಂತೆ ಕೇಳಿಕೊಳ್ಳುತ್ತಾನೆ. ಎರಡನೆಯ ವರವಾಗಿ, ಸ್ವರ್ಗಕ್ಕೆ ದಾರಿಯಾಗುವ ಅಗ್ನಿವಿದ್ಯೆಯ ಕಲಿಕೆ. ಅವೆರಡನ್ನೂ ಕೂಡಲೆ ಈಡೇರಿಸಲಾಗುತ್ತದೆ. ಆದರೆ ಮೂರನೆಯ ವರವು ಮೃತ್ಯುವನ್ನೂ ಬೆಚ್ಚಿಬೀಳಿಸುತ್ತದೆ: "ಮನುಷ್ಯ ಸಾವನ್ನಪ್ಪಿದ ನಂತರ ಏನಾಗುತ್ತದೆಂದು ತೋರಿಸು. ಅದರ



ಆತ್ಮವು ಭಾರೀ ಪ್ರಶ್ನೆಯನ್ನು ಮುಂದಿಟ್ಟಾಗ ಸಣ್ಣಪುಟ್ಟ ಉತ್ತರಗಳನ್ನು ಒಪ್ಪಲು ನಿರಾಕರಿಸುವ ಶ್ರದ್ಧೆಯ ಅತಿ ಪರಿಷ್ಕೃತ ರೂಪವಿದು. ಇದು ನಿರ್ಭಯತೆಯಲ್ಲ; ಇದು, ಭಯವನ್ನು ಹೋಲಿಕೆಯಲ್ಲಿ ಕನಿಷ್ಠಗೊಳಿಸುವಷ್ಟು ಅಗಾಧವಾಗಿ ಬೆಳೆದ ಹಂಬಲ.

ನಂತರವೂ ಆತ್ಮ ಇರುತ್ತದೆಯೆ? ಸತ್ಯವನ್ನು ತಿಳಿಸಿಕೊಡು.."

ಯಮನು, ಅಂಜಿಕೆಗೆ ಮಣಿದು ಒಪ್ಪಬಹುದಾಗಿದ್ದೆಲ್ಲವನ್ನು ಹೇಳಿ, ದಾರಿ ತಪ್ಪಿಸಲೆತ್ನಿಸಿದನು. ಆತ ಕಲ್ಪನಾತೀತ ಐಶ್ವರ್ಯ, ಸಾಮ್ರಾಜ್ಯ, ದೀರ್ಘಾಯುಸ್ಸು, ಅಪ್ಸರೆಯರು ಹಾಗು ಸುಖಭೋಗಗಳ ಆಸೆ ತೋರಿಸಿದನು. ಜಗತ್ತು ಬೆಂಬತ್ತಿ ಓಡುವ ಸಮಸ್ತ ಸಂಪತ್ತನ್ನು ಬಾಲಕನ ಪದತಲದಲ್ಲಿಟ್ಟರೂ ನಚಿಕೇತನು ಅವೆಲ್ಲವನ್ನು ನಿರಾಕರಿಸುತ್ತ, "ಇವೆಲ್ಲವೂ ನಶ್ವರ. ನೀನು ಮೃತ್ಯು ದೇವತೆ. ಬೇರೆಯವರಿಗಿಂತ ಚೆನ್ನಾಗಿ ನಿನಗಿದರ ಅರಿವಿದೆ. ಶಾಶ್ವತವಾದುದು ಯಾವುದೆಂದು ಹೇಳು," ಎಂದನು.

ಆತ್ಮವು ಭಾರೀ ಪ್ರಶ್ನೆಯನ್ನು ಮುಂದಿಟ್ಟಾಗ ಸಣ್ಣಪುಟ್ಟ ಉತ್ತರಗಳನ್ನು ಒಪ್ಪಲು ನಿರಾಕರಿಸುವ ಶ್ರದ್ಧೆಯ ಅತಿ ಪರಿಷ್ಕೃತ ರೂಪವಿದು. ಇದು ನಿರ್ಭಯತೆಯಲ್ಲ; ಇದು, ಭಯವನ್ನು ಹೋಲಿಕೆಯಲ್ಲಿ ಕನಿಷ್ಠಗೊಳಿಸುವಷ್ಟು ಅಗಾಧವಾಗಿ ಬೆಳೆದ ಹಂಬಲ.

ಚಾರೀಜಿಯವರು ಒಮ್ಮೆ ಈ ಕಥೆಯನ್ನು ಅವಲೋಕಿಸುತ್ತ, ಕಲಿಯುವ ಇಚ್ಛೆಯುಳ್ಳವರಿಗೆ ಸಾವು ಅತಿ ದೊಡ್ಡ ಶಿಕ್ಷಕನಾಗಬಹುದೆಂದು ಹೇಳಿದ್ದಾರೆ. ನಚಿಕೇತನು ಸಾವಿನ ಭಯವನ್ನು ಜಯಿಸಲಿಲ್ಲ; ಆತನಲ್ಲಿ ಸುರಕ್ಷೆಗಿಂತ ಹೆಚ್ಚಾಗಿ ಸತ್ಯದ ಹಂಬಲವಿತ್ತು. ಕಾಯಲ್ಪಟ್ಟ ದ್ವಾರವನ್ನು ತೆಗೆಯುವ ಕೀಲಿಕೈ ಇದೇ: ನಿವಾರಿಸುವ ಮೂಲಕ ಭಯವನ್ನು ಜಯಿಸಲಾಗದು, ಆದರೆ ಭಯವನ್ನು ಅಸಂಬದ್ಧವೆನಿಸುವಂತೆ ಮಾಡಬಲ್ಲ ಗುಣವನ್ನು ಬೆಳೆಸಿಕೊಳ್ಳುವುದರಿಂದ ಜಯಿಸಬಹುದು. ತನ್ನ ಮಗುವನ್ನು ಉಳಿಸಿಕೊಳ್ಳಲು ಉರಿಯುವ ಕಟ್ಟಡದೊಳಕ್ಕೆ ನುಗ್ಗುವ ತಾಯಿ, ಬೆಂಕಿಯ ಭಯವನ್ನು ಜಯಿಸಲು ಕಾಯುವುದಿಲ್ಲ. ಆಕೆಯ ಪ್ರೇಮ ಎಲ್ಲಕ್ಕಿಂತ ಹಿರಿದಾಗಿರುತ್ತದೆ. ಬೆಂಕಿ ಬದಲಾಗಿಲ್ಲ, ಆಕೆ ಬದಲಾಗಿದ್ದಾಳೆ.

## ಜೀವಿಸದ ಬದುಕಿನ ಸಂಸ್ಕಾರಗಳು

ಕನಸನ್ನು ಜೀವಿಸಿ ಸೋಲನ್ನು ಅನುಭವಿಸುವುದಕ್ಕಿಂತ ಕನಸುಗಾರನನ್ನು ಹೆಚ್ಚು ಕಾಡುವುದು, ಪ್ರಯತ್ನಿಸದೇ ಸತ್ತುಹೋದ ಕನಸುಗಳು. ವೈಫಲ್ಯದ ಸಂಸ್ಕಾರಗಳಿಗಿಂತ ಅಪೂರ್ಣತೆಯ ಸಂಸ್ಕಾರಗಳು ಹೆಚ್ಚು ಕಾಡುತ್ತವೆಂಬ ವಿವೇಚನೆಯನ್ನು ಸಂಪ್ರದಾಯಗಳು ಎಂದಿನಿಂದಲೂ ಕಲಿಸಿವೆ. ಪೂರ್ಣಗೊಳಿಸಿದ ಕೆಲಸ, ಅದು ದುಃಖದಲ್ಲಿ ಕೊನೆಗೊಂಡರೂ ಸರಿಯೆ, ಅದರಲ್ಲಿ ಶಾಂತಿ ತರುವ ಸಮಗ್ರತೆ ಇರುತ್ತದೆ. ಆದರೆ ತೊರೆಯಲ್ಪಟ್ಟ ಕನಸಿನಲ್ಲಿ ಅಂತಹ ಸಮಗ್ರತೆ ಇರುವುದಿಲ್ಲ. ಪರಿಹಾರವಾಗದ ಅದು ನಮ್ಮ ಪ್ರಜ್ಞೆಯಲ್ಲಿ ಹಾಗೆಯೆ ಜೀವಂತವಾಗಿ ಉಳಿದುಬಿಡುತ್ತದೆ ಹಾಗು ಅದು ಕೇಳುವ ಪ್ರಶ್ನೆಗೆ ಉತ್ತರಿಸಲು ಭಯ ನಮಗೆ ಅವಕಾಶ ನೀಡುವುದಿಲ್ಲ.

ಹಾರ್ಟ್‌ಫುಲ್‌ನೆಸ್ ಅಭ್ಯಾಸದಲ್ಲಿರುವ ಸಾಯಂಕಾಲದ ಶುದ್ಧೀಕರಣದಲ್ಲಿ, ನಾವು ಒಂದೆಡೆ ಕುಳಿತು, ಪ್ರತಿದಿನದ ಮುದ್ರೆಗಳನ್ನು ಬೆನ್ನಿನಿಂದ ಹೊರಕಳಿಸುತ್ತೇವೆ. ನಾವು ಮಾಡಿದ್ದನ್ನು, ಹೇಳಿದ್ದನ್ನು ಮತ್ತು ನಾವು ಅನುಭವಿಸಿದ್ದನ್ನು ಮುಕ್ತಗೊಳಿಸುತ್ತೇವೆ. ಆದರೆ ಅಪರೂಪವಾಗಿ ಚರ್ಚಿಸುವ ವಿಷಯವನ್ನು ತೆಗೆದುಕೊಳ್ಳಿ: ನಾವು ಮಾಡಿರದ ಕೆಲಸಗಳಿಂದ ರೂಪುಗೊಂಡ ಮುದ್ರೆಗಳನ್ನೇನು ಮಾಡುವುದು? ನಾವು ದೂರವಿಟ್ಟ ಸಂಭಾಷಣೆ, ಮಾತನಾಡದ ಸತ್ ಸಂಗತಿಗಳು, ಮುಂದಿಡದ ಹೆಜ್ಜೆ ಹಾಗು ವ್ಯಕ್ತಗೊಳಿಸದ ಪ್ರೇಮ, ಇವೆಲ್ಲವೂ ಮುದ್ರೆಗಳನ್ನು ಉಳಿಸುತ್ತವೆ. ಇವುಗಳನ್ನು ಶುದ್ಧೀಕರಿಸುವುದು, ಕರ್ಮದಿಂದ ರೂಪುಗೊಂಡ



ನಾವು ಏನನ್ನಾದರೂ ಮಾಡದಂತೆ ಪ್ರತಿ ಬಾರಿ ಭಯ ನಮ್ಮನ್ನು ತಡೆದಾಗಲೂ, ಆ ತಪ್ಪಿಸಿಕೊಳ್ಳುವಿಕೆ ಕೊಂಚ ಸುಲಭವಾಗುತ್ತದೆ ಹಾಗು ನಮ್ಮ ಧೈರ್ಯ ಕೊಂಚ ಕುಂಠಿತಗೊಳ್ಳುತ್ತದೆ. ತಪ್ಪಿಸಿಕೊಂಡ ಪ್ರತಿಯೊಂದು ಹೆಜ್ಜೆಯೊಂದಿಗೆ, ಜೀವಿಸದ ಬದುಕು ಭಾರವಾಗುತ್ತ ಹೋಗಿ, ಜೀವಿಸದ ಅದೇ ಭಾರವೇ ಮುಂದಿನ ಹೆಜ್ಜೆಯಿಡುವುದನ್ನು ಅಸಾಧ್ಯವನ್ನಾಗಿ ಮಾಡುತ್ತದೆ. ನೀವು ಚಲಿಸಲಾರಿರಿ ಎಂದಲ್ಲ, ನೀವು ಅದೇ ಜಾಗದಲ್ಲಿ ಅದೆಷ್ಟು ದೀರ್ಘಕಾಲ ನಿಂತಿದ್ದೀರೆಂದರೆ, ನಿಮ್ಮ ಪಾದಗಳ ಸುತ್ತಲೂ ನೆಲ ಬೆಳೆದುಬಿಟ್ಟಿದೆ.


ಮುದ್ರೆಗಳಿಗಿಂತ ಕಠಿಣವಾಗಬಹುದು, ಏಕೆಂದರೆ ಇವು ಘಟನೆಗಳಲ್ಲ, ಅಭಾವಗಳು. ನೆರಳಿನಂತಿರುವ ಅವುಗಳನ್ನು, ಹೇಗೆ ತೆಗೆದುಹಾಕುವುದು ?

ಭಯವು ಪ್ರತಿಬಾರಿ ಕೃತಿಯೊಂದನ್ನು ತಡೆದಾಗಲೂ, ಜೀವಿಸದ ಕೃತಿಯು ಅಪೂರ್ಣತೆಯ ಸಂಸ್ಕಾರವನ್ನು ಸಂಚಯಿಸುತ್ತದೆ. ತಿಂಗಳುಗಳು, ವರ್ಷಗಳು ಹಾಗು ದಶಕಗಳ ನಂತರ, ಈ ಸಂಚಯಗಳು ಒಟ್ಟುಗೂಡಿ ಸ್ಥೂಲತೆಯನ್ನುಂಟುಮಾಡುತ್ತವೆ. ಅವು ಆಲಸ್ಯದಂತೆ ಕಂಡರೂ ನಿಜಕ್ಕೂ ತಮಸ್ಸೇ ಆಗಿದ್ದು, ಸಾಧ್ಯವಿದ್ದರೂ ಜೀವಿಸದ ಬದುಕಿಗೆ ವ್ಯಥೆಯನ್ನು ಕಲ್ಪಿಸುತ್ತವೆ.

ನಾವು ಏನನ್ನಾದರೂ ಮಾಡದಂತೆ ಪ್ರತಿ ಬಾರಿ ಭಯ ನಮ್ಮನ್ನು ತಡೆದಾಗಲೂ, ಆ ತಪ್ಪಿಸಿಕೊಳ್ಳುವಿಕೆ ಕೊಂಚ ಸುಲಭವಾಗುತ್ತದೆ ಹಾಗು ನಮ್ಮ ಧೈರ್ಯ ಕೊಂಚ ಕುಂಠಿತಗೊಳ್ಳುತ್ತದೆ. ತಪ್ಪಿಸಿಕೊಂಡ ಪ್ರತಿಯೊಂದು ಹೆಜ್ಜೆಯೊಂದಿಗೆ, ಜೀವಿಸದ ಬದುಕು ಭಾರವಾಗುತ್ತ ಹೋಗಿ, ಜೀವಿಸದ ಅದೇ ಭಾರವೇ ಮುಂದಿನ ಹೆಜ್ಜೆಯಿಡುವುದನ್ನು ಅಸಾಧ್ಯವನ್ನಾಗಿ ಮಾಡುತ್ತದೆ. ನೀವು ಚಲಿಸಲಾರಿರಿ ಎಂದಲ್ಲ, ನೀವು ಅದೇ ಜಾಗದಲ್ಲಿ ಅದೆಷ್ಟು ದೀರ್ಘಕಾಲ ನಿಂತಿದ್ದೀರೆಂದರೆ, ನಿಮ್ಮ ಪಾದಗಳ ಸುತ್ತಲೂ ನೆಲ ಬೆಳೆದುಬಿಟ್ಟಿದೆ.

## ನಮ್ಮನ್ನು ಮುನ್ನಡೆಸುವುದು ಯಾವುದು?

ಆಧ್ಯಾತ್ಮಿಕ ಅರ್ಥದಲ್ಲಿ ಶ್ರದ್ಧೆಯ ಮೂಲವು, ಅನುಭವದಿಂದ ಬಂದ ವಿಶ್ವಾಸವೇ ಹೊರತು, ಪುರಾವೆಯಿಲ್ಲದ ನಂಬಿಕೆಯಲ್ಲ. ಧ್ಯಾನದಲ್ಲಿ ಕುಳಿತು ತಮಗಿಂತ ಬೃಹತ್ತಾದುದರ ಉಪಸ್ಥಿತಿಯನ್ನು ಅನುಭವಿಸಿದ ವ್ಯಕ್ತಿ, ಭಯದ ವಿವರಣೆಗೆ ಮೀರಿದುದನ್ನು ಎದುರಿಸುತ್ತಾನೆ. ಇದು ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಪುನರಾವರ್ತಿತಗೊಂಡು, ಭಯದಿಂದ ಅಳಿಸಲಾಗದ ದೃಢಬುನಾದಿಯನ್ನು ಕನಸುಗಾರನ ಪಾದದಡಿಯಲ್ಲಿ ನಿರ್ಮಿಸುತ್ತದೆ.



ಆಧ್ಯಾತ್ಮಿಕ ಅರ್ಥದಲ್ಲಿ ಶ್ರದ್ಧೆಯ ಮೂಲವು, ಅನುಭವದಿಂದ ಬಂದ ವಿಶ್ವಾಸವೇ ಹೊರತು, ಪುರಾವೆಯಿಲ್ಲದ ನಂಬಿಕೆಯಲ್ಲ. ಧ್ಯಾನದಲ್ಲಿ ಕುಳಿತು ತಮಗಿಂತ ಬೃಹತ್ತಾದುದರ ಉಪಸ್ಥಿತಿಯನ್ನು ಅನುಭವಿಸಿದ ವ್ಯಕ್ತಿ, ಭಯದ ವಿವರಣೆಗೆ ಮೀರಿದುದನ್ನು ಎದುರಿಸುತ್ತಾನೆ.

ಹಾರ್ಟ್‌ಫುಲ್‌ನೆಸ್ ಪದ್ಧತಿಯಲ್ಲಿ, ಭಯವು ಸೃಷ್ಟಿಸುವ ಬಲೆಯನ್ನು ಪ್ರಾಣಾಹುತಿ ಕರಗಿಸುತ್ತದೆ. ಪ್ರಾಣಾಹುತಿ ಹೃದಯವನ್ನು ಪ್ರವೇಶಿಸಿದಾಗ, ಅದು ಭಯದೊಂದಿಗೆ ವಾಗ್ವಾದಕ್ಕಿಳಿಯದು ಅಥವಾ ಮರು ಪುರಾವೆಯನ್ನೊದಗಿಸದು. ಅದು ಆ ಸ್ಥಳವನ್ನು ವಾಸ್ತವವಾದ ಹಾಗು ಇಂದ್ರಿಯಗ್ರಾಹ್ಯವಾದುದರೊಂದಿಗೆ ತುಂಬಿಸುವುದರಿಂದ, ಭಯ ತನ್ನ ಅಧಿಕಾರವನ್ನು ಕಳೆದುಕೊಳ್ಳುತ್ತದೆ. ಯಾರಾದರೂ ದೀಪವನ್ನು ಬೆಳಗಿಸಿದಾಗ ನಿಮಗೆ ಅಂಧಕಾರದಿಂದ ಭಯವಾಗದು. ಕತ್ತಲನ್ನು ಗೆದ್ದಿಲ್ಲ, ಅದನ್ನು ಅಸಂಗತವನ್ನಾಗಿ ಮಾಡಲಾಗಿದೆ.

ಇಲ್ಲಿ ಮಾರ್ಗದರ್ಶಿಯ ಪಾತ್ರವೂ ಇದೆ. ತನ್ನ ಪೋಷಕರ ಕೈಯನ್ನು ಹಿಡಿದು ನಡೆಯುವ ಮಗು, ತಾನು ಒಂಟಿಯಾಗಿ ಪ್ರವೇಶಿಸದ ಕೋಣೆಯನ್ನೂ ಪ್ರವೇಶಿಸುತ್ತದೆ. ಕೋಣೆ ಬದಲಾಗಿಲ್ಲದಿದ್ದರೂ, ಕೋಣೆಯಲ್ಲಿರುವುದನ್ನು ಎದುರಿಸಬಲ್ಲೆನೆಂಬ ಭರವಸೆಯನ್ನು ಆ ಕೈ ನೀಡುತ್ತದೆ. ಆಧ್ಯಾತ್ಮಿಕ ಮಾರ್ಗದರ್ಶಿಯು, ಪಥವನ್ನು ಈಗಾಗಲೆ ಕ್ರಮಿಸಲಾಗಿದೆಯೆಂಬ ಸಜೀವ ಆಶ್ವಾಸನೆಯನ್ನು ನೀಡುತ್ತಾರೆ. ರಕ್ಷಿಸಲ್ಪಟ್ಟ ಬಾಗಿಲಿನ ಹಿಂದಿನ ಕೋಣೆ ಅಪಾಯಕರವಲ್ಲ, ನೀವು ಅನ್ವೇಷಿಸುತ್ತಿರುವುದೇ ಅದರಲ್ಲಿ ತುಂಬಿದೆ ಹಾಗು ನಿಮಗೆ ಅಗತ್ಯವಿರುವವರೆಗೂ ಬೆಂಬಲ ದೊರೆವುದೆಂಬ ಭರವಸೆಯನ್ನು ಅವರು ನೀಡುತ್ತಾರೆ.

ಬಾಬೂಜಿಯವರು ಒಮ್ಮೆ ಮಾನವತೆಯನ್ನು ಅದೆಷ್ಟು ಕೋಮಲತೆಯಿಂದ ವರ್ಣಿಸಿದ್ದಾರೆಂದರೆ, ನಾವು ಚರ್ಚಿಸಿದ ಎಲ್ಲವನ್ನೂ ಅದು ಮರುವ್ಯಾಖ್ಯಾನಿಸುತ್ತದೆ. ಮಾನವ ಜೀವಿಗಳೆಲ್ಲರೂ ಭರವಸೆಯ ಅಗತ್ಯವಿರುವ ಮಕ್ಕಳಂತೆ ಎಂದು ಅವರು ಹೇಳಿದ್ದಾರೆ. ನಮಗೆ ಅದರ ಅರಿವಿರಲಿ, ಇಲ್ಲದಿರಲಿ, ನಾವೆಲ್ಲರೂ ಅನಾದಿಕಾಲದಿಂದ ಆಳವಾಗಿ ಬೇರೂರಿದ ಭಯವನ್ನು ನಮ್ಮೊಳಗಿಟ್ಟುಕೊಂಡಿದ್ದೇವೆ. ನಮ್ಮ ನಿಜವಾದ ನೆಲೆಯಿಂದ ದೂರವಾಗಿರುವ ನಾವು, ಖಾಲಿತನವನ್ನು ಅನುಭವಿಸುತ್ತೇವೆ ಹಾಗು ಅದನ್ನು ತುಂಬುವ ಅಗತ್ಯ ಇಂದಲ್ಲ ನಾಳೆ ಕಂಡುಬರಲೇಬೇಕು.



ಆಧ್ಯಾತ್ಮಿಕ ಮಾರ್ಗದರ್ಶಿಯು, ಪಥವನ್ನು ಈಗಾಗಲೆ ಕ್ರಮಿಸಲಾಗಿದೆಯೆಂಬ ಸಜೀವ ಆಶ್ವಾಸನೆಯನ್ನು ನೀಡುತ್ತಾರೆ. ರಕ್ಷಿಸಲ್ಪಟ್ಟ ಬಾಗಿಲಿನ ಹಿಂದಿನ ಕೋಣೆ ಅಪಾಯಕರವಲ್ಲ, ನೀವು ಅನ್ವೇಷಿಸುತ್ತಿರುವುದೇ ಅದರಲ್ಲಿ ತುಂಬಿದೆ ಹಾಗು ನಿಮಗೆ ಅಗತ್ಯವಿರುವವರೆಗೂ ಬೆಂಬಲ ದೊರೆವುದೆಂಬ ಭರವಸೆಯನ್ನು ಅವರು ನೀಡುತ್ತಾರೆ.

ದಯವಿಟ್ಟು ಆ ಪರಿಚ್ಛೇದವನ್ನು ಪುನಃ ಓದಿರಿ. ಬಾಬೂಜಿಯವರ ದೃಷ್ಟಿಯಲ್ಲಿ, ಭಯವು ಚಾರಿತ್ರ್ಯದೋಷವಲ್ಲ ಅಥವಾ ಲಜ್ಜೆಪಡುವ ದೌರ್ಬಲ್ಯವೂ ಅಲ್ಲ. ತನ್ನ ಮೂಲದಿಂದ ಬಹುದೂರ ಸಾಗಿ ಬಂದಿರುವ ಆತ್ಮದ ಅಸ್ತಿತ್ವದ ಸ್ಥಿತಿ. ನೀವನುಭವಿಸುವ ಭಯ ಹೇಡಿತನವಲ್ಲ, ಅದು ಮನೆಯ ನೆನಪು. ಹಾಗೆಯೆ ಬೀಗ ಹಾಕಿ ನೀವು ಕಾಯುತ್ತಿರುವ ಬಾಗಿಲಿನ ಹಿಂದಿರುವ ಕನಸು ಕಲ್ಪನೆಯಲ್ಲ, ಅದು ನೀವೆಲ್ಲಿಂದ ಬಂದಿರುವಿರೊ ಅದರ ನೆನಪು, ಮನೆಗೆ ಮರಳುವಂತೆ ಕರೆಯುತ್ತಿರುವ ನೆನಪು.

## ಸಾಯಲು ನಿರಾಕರಿಸುವ ಕನಸು

ನೀವೇನು ತಿಳಿದುಕೊಳ್ಳಬಾರದೆಂದು ಭಯ ಬಯಸುತ್ತದೆ? ಅದು ಕೊಂದಿದೆಯೆಂದು ನೀವು ತಿಳಿದುಕೊಂಡ ಕನಸು ಇನ್ನೂ ಜೀವಂತವಾಗಿದೆಯೆಂದು. ನೀವು ವಿವರಿಸಲಾಗದ ಚಡಪಡಿಕೆಯಲ್ಲಿ, ಬಾಹ್ಯ ಸುಖದ ಹೊರತಾಗಿಯೂ ಇರುವ ಅತೃಪ್ತಿಯಲ್ಲಿ ಹಾಗು ಬೆಳಗಿನ ಜಾವ ಮೂರು ಗಂಟೆಗೆ ನಿಮ್ಮ ಸುರಕ್ಷಿತ ಭಾವ ಕನಿಷ್ಠವಾಗಿದ್ದು, ಹೃದಯವು ಅನುಮತಿಯಿಲ್ಲದೆ ಮಾತನಾಡುವಾಗ ಬರುವ ವಿಚಿತ್ರ ಕಲಕುವಿಕೆಯಲ್ಲಿ ಅದು ಜೀವಂತವಾಗಿದೆ. ಆ ಕಲಕುವಿಕೆ ಆತಂಕವಲ್ಲ, ಅದು ತನ್ನನ್ನು ಹೊರಕಳಿಸುವಂತೆ ಕೇಳುತ್ತ, ಒಳಗಿನಿಂದ ಬಾಗಿಲು ಬಡಿಯುತ್ತಿರುವ ಕನಸು.



ಹಾಗೆಯೆ, ಭಯವು ಅತಿ ಅಸೂಯೆಯಿಂದ ಕಾಯುವ ರಹಸ್ಯ ಯಾವುದು? ಅದೇನೆಂದರೆ, ನೀವು ಪೂರ್ಣ ದೂರವನ್ನು ಕ್ರಮಿಸಬೇಕೆಂದಿಲ್ಲ, ಮೊದಲ ಹೆಜ್ಜೆಯಿಟ್ಟರೆ ಸಾಕು. ದೂರವು ಅನಂತವಾಗಿದೆಯೆಂದು ಭಯ ಹೇಳಿದರೆ, ಇದೊಂದು ಹೆಜ್ಜೆ, ಇದೊಂದು ಉಸಿರು, ಇದೊಂದು ಬೆಳಗಿನ ಧ್ಯಾನವೆಂದು ಶ್ರದ್ಧೆ ಹೇಳುತ್ತದೆ.



ದೂರವು ಅನಂತವಾಗಿದೆಯೆಂದು ಭಯ ಹೇಳಿದರೆ, ಇದೊಂದು ಹೆಜ್ಜೆ, ಇದೊಂದು ಉಸಿರು, ಇದೊಂದು ಬೆಳಗಿನ ಧ್ಯಾನವೆಂದು ಶ್ರದ್ಧೆ ಹೇಳುತ್ತದೆ.

ಎಲ್ಲ ಆಧ್ಯಾತ್ಮಿಕ ಸಂಪ್ರದಾಯಗಳೂ ಹೇಳುವ ಕಥೆಯೊಂದೇ: ಭಯ ಅನುಮತಿಸುವುದಕ್ಕಿಂತ ಹೆಚ್ಚಿನದನ್ನು ನೀವು ಸಾಧಿಸಬಲ್ಲಿರಿ. ಆತ್ಮದ ಸಾಮರ್ಥ್ಯ ಅನಂತವಾದುದು. ಈ ಪಂಜರವನ್ನು ನಾವೇ ಕಟ್ಟಿಕೊಂಡಿದ್ದೇವೆ ಹಾಗು ನೀವು ಜೀವನಪರ್ಯಂತ ಕಾಯ್ದ ಬಾಗಿಲಿಗೆಂದೂ ಹೊರಗಿನಿಂದ ಬೀಗ ಹಾಕಿರಲಿಲ್ಲ, ಅದನ್ನು ಒಳಗಿನಿಂದ ಮುಚ್ಚಲಾಗಿತ್ತು.

## ಪೂರ್ಣ ವೃತ್ತ

ಫೆಬ್ರವರಿಯಲ್ಲಿ ನಾವು ಸಂದೇಶಗಳ ಈ ಸರಣಿಯನ್ನು, ತನಗೇನು ಬೇಕು ಮತ್ತು ಯಾವುದು ಸರಿಯೆಂಬುದರ ನಡುವೆ ವಿಭಜಿತಗೊಂಡ ಹೃದಯದಿಂದ ಆರಂಭಿಸಿದೆವು. ನಂತರ ತನ್ನ ಉದ್ದೇಶವನ್ನು ಮರೆತ ಜ್ವಾಲೆ, ತನ್ನನ್ನು ತಾನೇ ನಂಬದ ಬುನಾದಿ, ಆಕಾಶವನ್ನೇ ತೆರೆಯಬಲ್ಲ ಸಿದ್ಧಿಗಳಿಂದ ನಿರ್ಮಿತವಾದ ಛಾವಣಿ, ಬೇರೆಯವರಿಂದ ಕಡ ತೆಗೆದುಕೊಂಡು ಅದು ನಮ್ಮದೇ ಎಂದು ತಪ್ಪು ತಿಳಿದ ಗಾಯ, ಹಾಗು ಅವು ಬಣ್ಣದ್ದಾಗಿವೆಯೆಂದೇ ಮರೆತ ಬಣ್ಣದ ಗಾಜಿನ ಗೋಡೆಗಳನ್ನು ಕುರಿತು ಚರ್ಚಿಸಿದೆವು.

ಈಗ, ಅವುಗಳನ್ನೆಲ್ಲ ಪೋಣಿಸುವ ದಾರವನ್ನು ಕಂಡುಹಿಡಿದೆವು: ಭಯ. ಬಯಕೆ ವಿಭಜಿಸುತ್ತದೆ, ಏಕೆಂದರೆ ನಾವು ಆಯ್ಕೆಮಾಡಲು ಭಯಪಡುತ್ತೇವೆ. ಜಡತ್ವ ಉಳಿಯುತ್ತದೆ, ಏಕೆಂದರೆ ನಾವು ಜಾಗೃತರಾಗಲು ಭಯಪಡುತ್ತೇವೆ. ಸಂಶಯ ಕೊರೆಯುತ್ತದೆ, ಏಕೆಂದರೆ ನಾವು ನಂಬಲು ಭಯಪಡುತ್ತೇವೆ. ಗರ್ವ ಆವರಿಸುತ್ತದೆ, ಏಕೆಂದರೆ ಮುಕ್ತ ಆಕಾಶವನ್ನು ಕಂಡು ನಾವು ಭಯಪಡುತ್ತೇವೆ. ಮತ್ಸರ ಮತ್ತೊಬ್ಬರ ಗಾಯವನ್ನು ಎರವಲು ತರುತ್ತದೆ, ಏಕೆಂದರೆ ನಾವು ನಮ್ಮದೇ ಕೊರತೆಯ ಬಗ್ಗೆ ಭಯಪಡುತ್ತೇವೆ. ಪೂರ್ವಗ್ರಹ ಕಿಟಕಿಗಳನ್ನು ಮುಚ್ಚುತ್ತದೆ, ಏಕೆಂದರೆ ಶೋಧಕವಿಲ್ಲದ ಬೆಳಕು ಏನನ್ನು ಅನಾವರಣಗೊಳಿಸುವದೊ ಎಂದು ನಾವು ಭಯಪಡುತ್ತೇವೆ.



ಕೊನೆಯಲ್ಲಿ, ಮೇಲಿನ ಆರು ಗುಣಗಳ ತಾಯಿಯಾದ ಭಯವು, ಒಳಗಿನಿಂದ ಬಾಗಿಲನ್ನು ಮುಚ್ಚಿ ಕೀಲಿ ಹಾಕುತ್ತದೆ; ಏಕೆಂದರೆ ಅದರ ಹಿಂದಿರುವುದು ನಾವು ಯಾವಾಗಲೂ ಜೀವಿಸಬೇಕಾದ ಬದುಕಾಗಿದೆಯೆ ಹೊರತು, ವಿನಾಶವಲ್ಲವೆಂಬುದನ್ನು ನಾವು ಮರೆತಿದ್ದೇವೆ.

ಕೊನೆಯಲ್ಲಿ, ಮೇಲಿನ ಆರು ಗುಣಗಳ ತಾಯಿಯಾದ ಭಯವು, ಒಳಗಿನಿಂದ ಬಾಗಿಲನ್ನು ಮುಚ್ಚಿ ಕೀಲಿ ಹಾಕುತ್ತದೆ; ಏಕೆಂದರೆ ಅದರ ಹಿಂದಿರುವುದು ನಾವು ಯಾವಾಗಲೂ ಜೀವಿಸಬೇಕಾದ ಬದುಕಾಗಿದೆಯೆ ಹೊರತು, ವಿನಾಶವಲ್ಲವೆಂಬುದನ್ನು ನಾವು ಮರೆತಿದ್ದೇವೆ. ಒಂದೇ ಒಂದು ಕೃತಿಯಿಂದ ಕೀಲಿಕೈ ತಿರುಗುತ್ತದೆ. ಅದು, ಎಲ್ಲ ಭಯಗಳನ್ನು ಜಯಿಸುವ ದೊಡ್ಡ ಕಾರ್ಯವಲ್ಲ, ನೀವು ಮಾಡಬಾರದೆಂದು ಭಯ ಹೇಳಿದ ಅದೊಂದು ಕೆಲಸವನ್ನು ಮಾಡುವ, ಹಿಂತಿರುಗಿ ನೋಡದ, ಸಣ್ಣ ಹೆಜ್ಜೆ. ಆದ್ದರಿಂದ, ಭಯವು ಇದಕ್ಕೆ ಅರ್ಥವಿಲ್ಲವೆಂದು ಹೇಳಿದರೂ ಧ್ಯಾನಕ್ಕೆ ಕುಳಿತುಕೊಳ್ಳಿ, ಇದು ಅಪಾಯವೆಂದು ಭಯ ಹೇಳಿದರೂ ಸತ್ಯವನ್ನೇ ನುಡಿಯಿರಿ; ನಿಮಗೆ ನೋವಾಗುವುದೆಂದು ಭಯ ಹೇಳಿದರೂ ಪೂರ್ಣವಾಗಿ ಪ್ರೀತಿಸಿ, ಹಾಗು ನೀವು ಬೀಳುವಿರೆಂದು ಭಯ ಹೇಳಿದರೂ ಹೆಜ್ಜೆ ಮುಂದಿಡಿ.

ಹಿಮ್ಮತ್ ಎ ಮರ್ದಾ, ಮದದ್ ಎ ಖುದಾ1<br>
ನೀವು ಧೈರ್ಯದಿಂದ ಒಂದು ಹೆಜ್ಜೆಯನ್ನು ಮುಂದಿಟ್ಟರೆ, ದೈವವು ಉಳಿದ ದೂರವನ್ನು ಕ್ರಮಿಸುತ್ತದೆ.

ಭಯ ಹೇಳುತ್ತದೆ, "ಹೀಗಾದರೆಂತು...?"

ಶ್ರದ್ಧೆ, "ಹಾಗಿದ್ದರೂ ಕೂಡ..." ಎಂದು, ತನಗಾಗಿ ಕಾಯುತ್ತಿರುವ ಬದುಕನ್ನು ಜೀವಿಸಲು ಮುಂದಾಗುತ್ತದೆ.

ಪ್ರೇಮಪೂರ್ವಕ ಪ್ರಾರ್ಥನೆಗಳೊಂದಿಗೆ,
**ಕಮಲೇಶ್**



ಪೂಜ್ಯ ಬಾಬೂಜಿ ಮಹಾರಾಜರ 127ನೆಯ ಜಯಂತ್ಯೋತ್ಸವ ಸಂದರ್ಭದಲ್ಲಿ ನೀಡಿದ ಸಂದೇಶ ಏಪ್ರಿಲ್ 29, 30, ಮತ್ತು ಮೇ 1, 2026, ಕಾನ್ಹಾ ಶಾಂತಿವನಂ

# There's More Waiting For You

to go a little deeper

## HEARTFULNESS APP

A Quiet Place to Start

Carry your practice with you — download the free app and connect with a personal trainer anytime.

Free Download. Daily practice. Trainer always Available.

Heartfulnessapp.org

## MASTERCLASSES

Go Deeper at Home

Learn with Daaji relaxation, meditation, cleaning, and prayer through three freely offered video sessions.

Free Videos. Learn from Daaji. 3 classes.

Heartfulness.org/global/masterclass

## RETREAT

Time for Just You

Step away from the noise and into a peaceful weekend that quietly deepens everything.

Peaceful Setting. Deepen Practice. Weekend Stays.

Heartfulness.org/global/retreat

## HEARTSPOTS

Find a Centre Near You

Your nearest meditation centre is closer than you think at no cost.

6000+ Centres. Heartful Community. Free to Visit.

Heartspots.heartfulness.org

Scan to download the free app, always there when you need it.
Start with a guided session, and let the practice find its own rhythm in you.
The journey inward begins with a single, still moment.

heartfulness

purity weaves destiny